ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 135ಎಸ್‌ಪಿಎಸ್(01) 2018

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:04/04/2019.

**ಜ್ಞಾಪನ**

| | |
|---|---|
| **ವಿಷಯ:** | ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳಲ್ಲಿ "Qualnet Network simulater" ಮೂಲಕ CNN Lab ತಂತ್ರಾಂಶ ಅಳವಡಿಸುವ ಬಗ್ಗೆ |
| **ಉಲ್ಲೇಖ:** | 1.ಉನ್ನತ ಶಿಕ್ಷಣ ಸಚಿವರ, ಆಪ್ತ ಕಾರ್ಯದರ್ಶಿ ರವರ ಪತ್ರ ಸಂಖ್ಯೆ: ಉಶಿ/ಆ.ಕಾ/1279/2019 ದಿ:19/01/2019 |
| | 2.ತಾಂತ್ರಿಕ ಪರಿಶೀಲನಾ ವರದಿ ದಿ:29/01/2019 |
| | 3.ಈ ಕಛೇರಿಯ ಪತ್ರ ಸಂಖ್ಯೆ: *ಸಂಖ್ಯೆ: ಡಿಟಿಇ 135ಎಸ್‌ಪಿಎಸ್(01) 2018 ದಿ:29/01/2019* |
| | 4.ಸರ್ಕಾರದ ಪತ್ರ ಸಂಖ್ಯೆ:ಇಡಿ 12 ಇ-ಆಡಳಿತ 2019 ದಿ:01/04/2019 |

----------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ ಎಸ್.ಕೆ.ಎಸ್.ಜೆ.ಟಿ.ಇ-ಬೆಂಗಳೂರು ಮತ್ತು ಯು.ವಿ.ಸಿ.ಇ-ಬೆಂಗಳೂರು ಹಾಗೂ ಇತರೆ ಕಾಲೇಜುಗಳಲ್ಲಿ ಈಗಾಗಲೇ "Qualnet Network simulater" ಮೂಲಕ CNN Lab ತಂತ್ರಾಂಶವನ್ನು ಅಳವಡಿಸಿಕೊಂಡಿದ್ದು, ಈ ತಂತ್ರಾಂಶವು ಬೋಧನೆ ಹಾಗೂ ಸಂಶೋಧನೆಗೆ ಉಪಯುಕ್ತವಾಗಿರುವ ಬಗ್ಗೆ ಸಕಾರಾತ್ಮಕ ಅಭಿಪ್ರಾಯ ವ್ಯಕ್ತವಾಗಿರುವ ಹಿನ್ನಲೆಯಲ್ಲಿ ಸದರಿ ತಂತ್ರಾಂಶವನ್ನು ಇತರೆ ಎಲ್ಲಾ ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಅಳವಡಿಸುವ ಬಗ್ಗೆ ಪರಿಶೀಲಿಸಿ, ವಿವರವಾದ ವರದಿಯೊಂದಿಗೆ ಪ್ರಸ್ತಾವನೆಯನ್ನು ಮಾನ್ಯ ಸಚಿವರ ಅವಗಾಹನೆಗೆ ಸಲ್ಲಿಸುವಂತೆ ನಿರ್ದೇಶಿಸಲಾಗಿದ್ದು, ಉಲ್ಲೇಖ(2) ರಲ್ಲಿ ಸದರಿ ತಂತ್ರಾಂಶ ಅಳವಡಿಸುವ ಬಗ್ಗೆ ವರದಿಯನ್ನು ಪಡೆದು ಉಲ್ಲೇಖ (3) ರಲ್ಲಿ ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ.

ಉಲ್ಲೇಖ (4) ರ ಸರ್ಕಾರದ ಪತ್ರದಲ್ಲಿ ಉಚಿತವಾಗಿ ದೊರೆಯುವ NS2 /NS3 ತಂತ್ರಾಂಶದ ಬದಲಾಗಿ "Qualnet Network simulater" ತಂತ್ರಾಂಶವನ್ನು ಅಳವಡಿಸುವ ಬಗ್ಗೆ ಸೂಕ್ತ ಕಾರಣಗಳನ್ನು ಸೂಕ್ತಸಮರ್ಥನೆಗಳೊಂದಿಗೆ ನೀಡಲು ನಿರ್ದೇಶಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಎಸ್.ಕೆ.ಎಸ್.ಜೆ.ಟಿ.ಇ-ಬೆಂಗಳೂರು ಮತ್ತು ಯು.ವಿ.ಸಿ.ಇ-ಬೆಂಗಳೂರು ಹಾಗೂ ಇತರೆ ಇಂಜಿನೀಯರಿಂಗ್ ಕಾಲೇಜುಗಳಲ್ಲಿ NS2 /NS3 ತಂತ್ರಾಂಶದ ಬದಲಾಗಿ "Qualnet Network simulater" ತಂತ್ರಾಂಶವನ್ನು ಅಳವಡಿಸಿರುವುದರಿಂದ, ಉಳಿದ 09 ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳಲ್ಲಿ licenced latest version "Qualnet Network simulater" ತಂತ್ರಾಂಶ ಅಳವಡಿಸುವ ಬಗ್ಗೆ ಪರಿಶೀಲಿಸಿ ವರದಿ ನೀಡಲು ದಿ:08/04/2019 ರಂದು ಬೆಳಗ್ಗೆ 11.00 ಗಂಟೆಗೆ ಜಂಟನಿರ್ದೇಶಕರು(ಎಟಿಎಸ್), ತಾಂತ್ರಿಕ ಶಿಕ್ಷಣ

Scanned by CamScanner

ನಿರ್ದೇಶನಾಲಯ ಬೆಂಗಳೂರು ಇಲ್ಲಿ ಹಾಜರಿರಲು ಈ ಕೆಳಗಿನ ಸಮಿತಿಗೆ ಸೂಚಿಸಲಾಗಿದೆ ಹಾಗೂ ಕೆ.ಸಿ.ಎಸ್.ಆರ್. ನಿಯಾಮಾವಳಿ ಪ್ರಕಾರ ಪ್ರಯಾಣ ಭತ್ಯೆ ಇತರೆ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.

**ವಿಷಯ ತಜ್ಞರ ಸಮಿತಿ:-**

| | | |
|---|---|---|
| 01 | ಶ್ರೀ ಜಯರಾಜ್.ಬಿ. ಜಂಟಿನಿರ್ದೇಶಕರು(ಎಟಿಎಸ್), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು | |
| 02 | ಶ್ರೀ ವೈ.ಕೆ.ಸತ್ಯನಾರಾಯಣ, ಉಪನಿರ್ದೇಶಕರು (ಸಿಡಿಸಿ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು | ಅಧ್ಯಕ್ಷರು |
| 03 | ಶ್ರೀ ಮಹಮ್ಮದ್ ಅನ್ಸಾರ್, ಸಹಾಯಕ ನಿರ್ದೇಶಕರು(ಎಟಿಎಸ್), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು | ಸದಸ್ಯರು |
| 04 | ಶ್ರೀ ಅನಿಲ್ ಕುಮಾರ್ , ಅಸೋಸಿಯೇಟ್ ಪ್ರೊಫೆಸರ್, ಎಸ್.ಕೆ.ಎಸ್.ಜೆ.ಟಿ, ಬೆಂಗಳೂರು | ಸದಸ್ಯರು |
| 05 | ಶ್ರೀ ಚೂಡಾರತ್ನಾಕರ, ಅಸೋಸಿಯೇಟ್ ಪ್ರೊಫೆಸರ್, ಸರ್ಕಾರಿ ಇಂಜಿನೀಯರಿಂಗ್ ಕಾಲೇಜ್-ಕುಶಾಲನಗರ | ಸದಸ್ಯರು |
| 05 | ಶ್ರೀ ಸಂದೀಪ್, ಅಸೋಸಿಯೇಟ್ ಪ್ರೊಫೆಸರ್, ಸರ್ಕಾರಿ ಇಂಜಿನೀಯರಿಂಗ್ ಕಾಲೇಜ್-ರಾಮನಗರ | ಸದಸ್ಯರು |
| 06 | ಶ್ರೀ ರಾಮಚಂದ್ರ, ಅಸೋಸಿಯೇಟ್ ಪ್ರೊಫೆಸರ್, ಸರ್ಕಾರಿ ಇಂಜಿನೀಯರಿಂಗ್ ಕಾಲೇಜ್-ರಾಮನಗರ | |
| 07 | ಶ್ರೀ ಪಲ್ಲವಿ, ಅಸೋಸಿಯೇಟ್ ಪ್ರೊಫೆಸರ್, ಸರ್ಕಾರಿ ಇಂಜಿನೀಯರಿಂಗ್ ಕಾಲೇಜ್-ಹಾಸನ | ಸದಸ್ಯರು |

ಹಾಗೂ ಕೆ.ಸಿ.ಎಸ್.ಆರ್. ನಿಯಾಮಾವಳಿ ಪ್ರಕಾರ ಪ್ರಯಾಣ ಭತ್ಯೆ ಇತರೆ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.

ತಮ್ಮ ವಿಶ್ವಾಸಿ,

ನಿರ್ದೇಶಕರು.

ಪ್ರತಿ ಇವರಿಗೆ:

3. ಮೇಲ್ಕಂಡ ಎಲ್ಲಾ ಸಂಸ್ಥೆಗಳ ಪ್ರಾಚಾರ್ಯರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
4. ಇ ಆಡಳಿತ ವಿಭಾಗಕ್ಕೆ

Scanned by CamScanner